ಕರ್ನಾಟಕ ವಿಧಾನ ಸಭೆ

ಶುಕ್ರವಾರ, ದಿನಾಂಕ ೩೦ನೇ ಜನವರಿ ೧೯೮೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಹುತಾತ್ಮರ ಸ್ಮರಣಾರ್ಥ ಮೌನಾಚರಣೆ

ಅಧ್ಯಕ್ಷರು.—ಈಗ ಹುತಾತ್ಮರ ಸ್ಮರಣಾರ್ಥ ಎಲ್ಲರೂ ಎದ್ದು ಎರಡು ನಿಮಿಷ ಮೌನಾಚರಣೆ ಮಾಡುವುದು.

(ಸಭೆಯು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣಾರ್ಪಣೆ ಮಾಡಿದವರ ಸ್ಮರಣಾರ್ಥವಾಗಿ ಎರಡು ನಿಮಿಷಗಳ ಮೌನವನ್ನು ಆಚರಿಸಿ ತನ್ನ ಗೌರವವನ್ನು ಸೂಚಿಸಿತು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆ ಅವರ ಹೆಸರಿನಲ್ಲಿರುವ ೧ (೧೫)ನೇ ಪ್ರಶ್ನೆ ಮುಂದೆ ಹೋಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಈಗ ಅಧಿಕಾರಿಗಳು ಹಾಸ್ಪಟಲ್‌ಗಳಲ್ಲಿ, ೫೦ ರೂಪಾಯಿಗಳ ಬೆಡ್ಡಿಗೆ ೧೫೦ ರೂಪಾಯಿಗಳ ತರಹ ಬಿಲ್ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ತರಿಸುವಾಗ ಇದನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಜಿ. ಬಸವಣ್ಣಪ್ಪ.—ಈ ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ ೩ ಇಲಾಖೆಗಳು ಇವೆ. ಒಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ, ಎರಡು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಮೂರನೆಯದು ಎಂದರೆ ಮಹಿಳೆಯರು, ಮಕ್ಕಳು ಮತ್ತು ಅಂಗವಿಕಲರಿಗೆ ಸಂಬಂಧಪಟ್ಟ ಇಲಾಖೆ. ಇಲ್ಲಿ ಮಾನ್ಯ ಸದಸ್ಯರು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದರೆ ನಮ್ಮ ಅಧಿಕಾರಿಗಳು ಮಹಿಳೆಯರು, ಮಕ್ಕಳು ಹಾಗೂ ಅಂಗವಿಕಲರಿಗೆ ಸಂಬಂಧಪಟ್ಟಂತೆ ವಿವರಗಳನ್ನು ಸಂಗ್ರಹ ಮಾಡಿದ್ದಾರೆ. ಈ ಕಾರಣದಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಂಡಿದ್ದೇನೆ. ಈ ಬಗ್ಗೆ ಹಾಸ್ಪಟಲ್‌ಗಳ ಮಾನ್ಯ ಸದಸ್ಯರು ಎಷ್ಟು ಕಟುವಾಗಿದ್ದರೋ ನಾನು ಸಹ ಅಷ್ಟೇ ಕಟುವಾಗಿದ್ದೇನೆ. ಮಾನ್ಯ ಸದಸ್ಯರು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ನಾನು ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಒಂದು ವಿಷಯವನ್ನು ಹೇಳುತ್ತೇನೆ, ಕೇಳಿ. ಅಲ್ಲಿ ೫೦ ರೂಪಾಯಿ ಬೆಡ್ಡಿಗೆ ೧೫೦ ರೂಪಾಯಿ ಬಿಲ್ ಮಾಡಿದ್ದಾರೆ.

ಅಧ್ಯಕ್ಷರು.—ಉತ್ತರ ಸರಿಯಾಗಿ ಬೇಕಾದರೆ ಮುಂದಿನವಾರ ತರಿಸಿಕೊಡುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಕೂಲಂಕುಷವಾಗಿ ಎಲ್ಲಾ ವಿವರಗಳನ್ನು ಅಧಿಕಾರಿಗಳಿಂದ ಪಡೆ ತರಿಸುವುದಿಲ್ಲ ಅಂದರೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಸಿಕ್ಕಿಬಿದ್ದಿದ್ದಾರೆ. ಆದಕ್ಕಾಗಿ ಇನ್‌ಫರ್ಮೇಷನ್ ಕೊಡುತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ನಿನ್ನೆಯ ದಿವಸ ಅಧಿಕಾರಿಗಳ ಸಭೆ ಕರೆದು ಉತ್ತರ ಕನ್ನಡ ಜಿಲ್ಲೆಯ ಸಮಗ್ರ ವಿವರವನ್ನು ಕೇಳಿದ್ದೇನೆ. ಅವರು ಕೊಡುತ್ತಾರೆ. ಅದನ್ನೆಲ್ಲಾ ಹೌಸ್‌ಗೆ ಹೈಲೈಟ್ ಮಾಡುತ್ತೇನೆ.